ದಿಃ 11-10-2019 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಶ್ರೀ ಸಿ ಪಿ ಯು ವಕೀಲರಿಂದಃ ವಾದಿ ಪರವಾಗಿ

2. ಸರ್ವೆ ನಂ. 97 ರಲ್ಲಿ 1 ಎಕರೆ ವಿಸ್ತೀರ್ಣದ ಜಮೀನು ನನಗೆ ಸೇರಿದ್ದು. ಈಗ ನನಗೆ ತೋರಿಸುತ್ತಿರುವ ಪೋಟೋದಲ್ಲಿನ ಜಮೀನು ಸರ್ವೆ ನಂ. 97 ರದ್ದಾಗಿದೆ ಅದು ನನಗೆ ಸೇರಿದ್ದು. ಸದರಿ ಜಮೀನಿನಲ್ಲಿ ನಾನು ಅಡಿಕೆ ತೋಟ ಮಾಡಿದ್ದೇನೆ. ಸದರಿ ಅಡಿಕೆ ತೋಟವನ್ನು ಹೊರತು ಪಡಿಸಿ ಪೋಟೋದಲ್ಲಿ ಕಾಣುತ್ತಿರುವ ಖಾಲಿ ಜಾಗ ದಾವಾ ಸ್ವತ್ತು ಸರ್ವೆ ನಂ. 94/2 ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಸದರಿ ಸರ್ವೆ ನಂ. 94/2 ರಲ್ಲಿ 2 ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದೇನೆ ಎನ್ನುತ್ತಾರೆ. ಸಾಕ್ಷಿಗೆ ತೋಗಿಸಿದ ಫೋಟೋವನ್ನು ಒಪ್ಪಿದ ಕಾರಣ ನಿಪಿ-10 ಎಂದು ಗುರುತಿಸಲಾಯಿತು. ಸದರಿ ದಾವಾಸ್ತಿಯಲ್ಲಿ ಸ್ವಾಧೀನದಲ್ಲಿದ್ದೇನೆ ಎಂದು ತೋರಿಸಲು ಯಾವುದೇ ಕಂದಾಯ ರಶೀದಿ ಹಾಗೂ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ದಾವಾಸ್ತಿ ಆರ್ ಟಿ ಸಿ ಗಳಲ್ಲಿ ಸ್ವಾಧೀನದಾರರರ ಕಾಲಂ ನಲ್ಲಿ ನನ್ನ ಹೆಸರನ್ನು ನಮೂದಿಸಲು ಕಂದಾಯ ಅಧಿಕಾರಿಗಳಿಗೆ ಕೋರಿಕೆಪತ್ರ ನೀಡಿಲ್ಲ ದಾವಾಸ್ತಿ ವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ಜಮೀನು ನನ್ನ ತಮ್ಮನಿಗೆ ಸೇರಿದ್ದು ಎನ್ನುವ ಬಗ್ಗೆ ನಾನು ಯಾವುದೇ ದಾಖಲಾತಿಗಳನ್ನು ನೋಡಿಲ್ಲ. ನಾನು ಹಿಂದಿನಿಂದಲೂ ಹಾಗೂ ಈಗಲೂ ಸಹ ಬೆಂಬಳೂರು ಆಲೂರು ತಾಲೂಕಿನಲ್ಲಿ ಖಾಯಂ ವಾಸಿಯಾಗಿದ್ದೇನೆ. ಈ ವರ್ಷ ದಾವಾಸ್ತಿಯಲ್ಲಿ ಗದ್ದೆ ನಾಟಿ ಮಾಡಿದ್ದೇನೆ. ಸಾಕ್ಷಿ ಮುಂದುವರೆದು 14 ಗುಂಟೆಯಲ್ಲಿ ಗದ್ದೆ ನಾಟಿ ಮಾಡಿದ್ದು ಉಳಿದ ಜಮೀನನ್ನು ಆನೆ ಕಾಟವಿರುವ ಕಾರಣ ಹಾಗೆ ಬಿಟ್ಟಿದ್ದೇನೆ ಎನ್ನುತ್ತಾರೆ. ಈ ಬಗ್ಗೆ ನಾನು ಬೆಳೆ ದೃಢೀಕರಣಪತ್ರ ವನ್ನು ಹಾಜರುಪಡಿಸಿಲ್ಲ.

3. ನಾನು ಒ.ಎಸ್ 50/14 ನ್ನು ವಾದಿಯ ಮೇಲೆ ಹೂಡಿದ್ದೆ. ಅದರಲ್ಲಿ ನನಗೆ ಅನಾನುಕೂಲವಾದ ಕಾರಣ ಎಂ.ಎ 14/06 ರಂತೆ ಅಪೀಲು ಸಲ್ಲಿಸಿದೆ ಎಂದರೆ ಸರಿ. ಸದರಿ ಅಪೀಲಿನಲ್ಲಿ ನನ್ನ ಹಾಗೂ ವಾದಿಯ ಒಪ್ಪಿಗೆಯ ಮೇರೆಗೆ ಸರ್ವೆಯರ್ ನೇಮಕಗೊಂಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಸರ್ವೆಯರ್ ಭೇಟಿಯ ಸಮಯ ನಾನು, ವಾದಿ ಹಾಗೂ ಸಾಕ್ಷಿದಾರರು ಹಾಜರಿದ್ದರು ಎಂದರೆ ಸರಿ. ಈಗ ನನಗೆ ತೋರಿಸಿದಂತೆ ಸರ್ವೆಯರ್ ವರದಿ ಸಲ್ಲಿಸಿದ್ದರು ಎಂದರೆ ಸರಿ. ಸಾಕ್ಷಿ ನೋಡಿ ಒಪ್ಪಿದ ಕಮಿಷನರ್ ವರದಿಯನ್ನು ಅದಕ್ಕೆ ಲಗತ್ತಾದ ನಕ್ಷೆ ಹಾಗೂ ಹೇಳಿಕೆಗಳನ್ನು ಒಟ್ಟಾಗಿ ನಿಪಿ-11 ಎಂದು ಗುರುತಿಸಲಾಯಿತು. ಸದರಿ ಕಮಿಷನರ್ ವರದಿಯಲ್ಲಿ ವಾದಿ ಸರ್ವೆ ನಂ. 97 ರಲ್ಲಿ 1 ಎಕರೆ, ಸರ್ವೆ ನಂ. 94 ರಲ್ಲಿ 2 ಎಕರೆ 9 ಗುಂಟೆ ಸ್ವಾಧೀನದಲ್ಲಿದ್ದಾರೆ ಎಂದು ಬರೆದಿದೆ ಎಂದರೆ ಸರಿ. ಕಮಿಷನರ್ ವರದಿ ಸರಿಯಿಲ್ಲವೆಂದು ನಾನು ತಕರಾರು ಸಲ್ಲಿಸಿಲ್ಲ. ಈಗಲು ಸಹ ದಾವಾಸ್ತಿಯ ಪಹಣಿ ವಾದಿಯ ಹೆಸರಿನಲ್ಲಿದೆ ಎಂದರೆ ಸರಿ.

4. ಇದೇ ನ್ಯಾಯಾಲಯದಲ್ಲಿ ಒ ಎಸ್ 74/08 ರಂತೆ ದಾವಾಸ್ತಿಗೆ ಸಂಬಂಧಿಸಿದಂತೆ ನನ್ನ ವಿರುದ್ಧ ದಾವೆ ಹೂಡಲಾಗಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಈಗ ನನಗೆ ತೋರಿಸುತ್ತಿರುವ ಮೆಮೋವನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ಒ ಎಸ್ 74/08 ರ ಮೆಮೋದ ದೃಢೀಕೃತ ನಕಲನ್ನು ನಿಪಿ-12 ಎಂದು ಗುರುತಿಸಲಾಯಿತು. ಸದರಿ ಮೆಮೋ ಸಲ್ಲಿಸುವ ಸಮಯದಲ್ಲಿ ನನ್ನ ಹಾಗೂ ವಾದಿಯ ನಡುವೆ ಇದ್ದ ಗಡಿ ಗುರುತಿನ ಬಗ್ಗೆ ಇದ್ದ ಸಮಸ್ಯೆಯನ್ನು ಬಗೆಹರಿಸಿಕೊಂಡು ಮೇಮೋ ಸಲ್ಲಿಸಿದ್ದೇನೆ ಎದರೆ ಸರಿ. ಮೆಮೋ ಆದಾರದ ಮೇಲೆ ದಾವೆ ಮುಕ್ತಾಯವಾಯಿತು ಎಂದರೆ ಸರಿ. ಆ ದಾವೆ ಮುಕ್ತಾಯವಾದ ನಂತರ ದಾವಾಸ್ತಿಯ 14 ಗುಂಟೆ ಜಮೀನಿನಲ್ಲಿ ನಾನು ದಿಃ 01-06-2011 ರಲ್ಲಿ ಒತ್ತುವರಿ ಮಾಡಿಕೊಂಡು ಬೆಳೆ ಮಾಡಿದ್ದೇನೆ ಎಂದರೆ ಸಾಕ್ಷಿ ಸರಿ, ಉಳಿಕೆ 2 ಎಕರೆಯಲ್ಲಿಯೂ ಸಹ ನಾನೇ ಸ್ವಾಧೀನದಲ್ಲಿದ್ದೇನೆ ಎನ್ನುತ್ತಾರೆ. ಆರ್ ಟಿ ಸಿ ಪ್ರಕಾರ ದಾವಾಸ್ತಿ ವಾದಿಯ ಹೆಸರಿನಲ್ಲಿ ದಾಖಲಾಗಿದೆ ಎಂದರೆ ಸಾಕ್ಷಿಯು ಆರ್ ಟಿ ಸಿ ಮಾಡಿಸಿಕೊಂಡಿರುವ ವಿಚಾರ ನನಗೆ ತಿಳಿದಿಲ್ಲ ಎನ್ನುತ್ತಾರೆ. ವಾದಿಯ ಹೆಸರಿಗೆ ದಾಖಲಾಗುವ

ಮೊದಲು ದಾವಾಸ್ತಿಯ ಆರ್ ಟಿ ಸಿ ನನ್ನ ಹೆಸರಿನಲ್ಲಿರಲಿಲ್ಲ. ವಾದಿಯ ಹೆಸರು ದಾಖಲಾಗುವ ಮೊದಲು ದಾವಾಸ್ತಿ ಯಾರ ಹೆಸರಿನಲ್ಲಿ ದಾಖಲಾಗಿತ್ತೆಂದು ನನಗೆ ಗೊತ್ತಿಲ್ಲ. ದಾವಾಸ್ತಿಗೆ ವಾದಿಯೇ ಮಾಲೀಕರಾಗಿದ್ದು ನಾನು ಅದನ್ನು ಅಕ್ರಮವಾಗಿ ಒತ್ತುವರಿಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ ಈ ದಾವೆಯ ಪೂರ್ವ ಹಿಂದೆಯೂ ಸ್ವಾಧೀನ ಬಿಟ್ಟುಕೊಡುತ್ತೇನೆ ಎಂದು ಹೇಳಿದ್ದರು ದಾವಾಸ್ತಿಯನು ಬಿಟ್ಟುಕೊಡದ ಕಾರಣ ದಾವೆ ಹೂಡಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ ಕಿರುಕುಳ ನೀಡಲು ಆಸ್ತಿಯನ್ನು ದಕ್ಕಿಸಿಕೊಳ್ಳಲು ಪ್ರಯತ್ನ ಪಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್, ಆಲೂರು